ಪ್ರಕಾಶ್ ಪಾಟೀಲ್ ಏನು ಹೇಳುತ್ತಿದ್ದಾರೆ, ಈ Viability Gap Funding ನಲ್ಲಿ ರಾಜ್ಯ ಶೇಕಡಾ 20ರಷ್ಟು, ಕೇಂದ್ರ ಸರ್ಕಾರದ ಶೇಕಡಾ 20ರಷ್ಟು ಹಣ ಕೊಡುವ ವ್ಯವಸ್ಥೆ ಇಟ್ಟುಕೊಂಡು, ಶೇಕಡಾ 60ರಷ್ಟು ಮಾತ್ರ ಗುತ್ತಿಗೆದಾರರು ಹಣ ತೊಡಗಿಸಬೇಕು. ಈ ಕಂಡೀಷನ್ ಮೇಲೆ ಟೆಂಡರ್ ಕರೆಯುವುದಕ್ಕೆ ವ್ಯವಸ್ಥೆ ಇದೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ರಾಜ್ಯದ್ದು ಎಷ್ಟಿದೆ?

ಶ್ರೀ ಸಿ.ಎಂ.ಉದಾಸಿ: ರಾಜ್ಯದ್ದು 20% ಎಂದು ಹೇಳಿದ್ದೇನೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಜಾಸ್ತಿ ಮಾಡಿ

ಶ್ರೀ ಸಿ.ಎಂ.ಉದಾಸಿ: ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಒಪ್ಪಿಕೊಳ್ಳುತ್ತಾರೆ. ಈಗ ಬಹಳ ಜನ ಒಪ್ಪಿಕೊಳ್ಳುತ್ತಾರೆ ಎನ್ನುವ ವಿಶ್ವಾಸವಿದೆ. ಇದು ಎರಡು ತಿಂಗಳಿಗೆ, 30-07-2009ಕ್ಕೆ ಟೆಂಡರ್ ಕರೆದಿದ್ದೂ ಇದೆ. ಅದು final ಆಗುತ್ತದೆ.

ಶ್ರೀ ಸುಭಾಷ್ ಆರ್. ಗುತ್ತೇದಾರ್: ಯಾರು ಬರಲಿಲ್ಲವೆಂದರೆ ಏನು ಮಾಡುತ್ತೀರಿ? ಒಪ್ಪಿಕೊಳ್ಳಲಿಲ್ಲವೆಂದರೆ ಏನೂ ಮಾಡುತ್ತೀರಿ?

ಶ್ರೀ ಸಿ.ಎಂ.ಉದಾಸಿ: ಒಪ್ಪಿಕೊಳ್ಳಲಿಲ್ಲವೆಂದರೆ, ಮುಂದೆ ಸರ್ಕಾರ ರಸ್ತೆ ನಿರ್ಮಾಣಕ್ಕಾಗಿ ಯಾವುದಾದರೂ ಬೇರೆ ಮಾರ್ಗದಿಂದ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಚಿತ್ರದುರ್ಗ ಕೋಟೆ ಒತ್ತುವರಿ ತಡೆಗಟ್ಟುವ ಬಗ್ಗೆ

57(203) ಶ್ರೀ ತಿಪ್ಪೇಸ್ವಾಮಿ(ಚಳ್ಳಕೆರೆ)
ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)

ಅ) ಚಿತ್ರದುರ್ಗದ ಐತಿಹಾಸಿಕ ಕೋಟೆಯ ಜಾಗದಲ್ಲಿ ಒತ್ತುವರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ಒದಗಿಸುವುದು);

ಬಂದಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣದ ಸುಪರ್ದಿನಲ್ಲಿರುವ ಬುರಟನಹಟ್ಟಿ ಪ್ರದೇಶ, ಗಾರೆಬಾಗಿಲು ಹಾಗೂ ಇತರ ಪ್ರದೇಶಗಳಲ್ಲಿ ಒತ್ತುವರಿ ಕಂಡುಬರುತ್ತದೆ.

ಆ) ಈ ಒತ್ತುವರಿಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ;

ಒತ್ತುವರಿಯಾಗಿರುವ ಪ್ರದೇಶವನ್ನು ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ಮೋಜಣಿದಾರರಿಂದ ಮೋಜಣಿ ಮಾಡಿಸಿ ಒತ್ತುವರಿಯಾಗಿರುವ ಪ್ರದೇಶವನ್ನು ಗುರುತಿಸಿ, ಒತ್ತುವರಿದಾರರನ್ನು ತೆರವುಗೊಳಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣೆಯು ಈಗಾಗಲೇ ಕ್ರಮ ವಹಿಸಿದೆ.

ಇ) ಹಾಲಿ ಒತ್ತುವರಿ ಮಾಡಿರುವವರ ವಿರುದ್ಧ ಯಾವ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಲಾಗಿದೆ?

ಕೋಟೆ ಪ್ರದೇಶವನ್ನು ಒತ್ತುವರಿ ಮಾಡಿಕೊಂಡಿದ್ದ 118 ಜನರಿಗೆ ಪುನರ್ ವಸತಿ ಕಲ್ಪಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣೆಯು ಕ್ರಮ ಕೈಗೊಂಡಿರುತ್ತದೆ. ಒತ್ತುವರಿಯನ್ನು ತಡೆಗಟ್ಟಲು ತಡೆಗೋಡೆ ನಿರ್ಮಾಣ ಮಾಡಲು ಯೋಜನೆ ಇರುತ್ತದೆ.

ಶ್ರೀ ತಿಪ್ಪೇಸ್ವಾಮಿ: ಸನ್ಮಾನ್ಯ ಅಧ್ಯಕ್ಷರೇ, ನನಗೆ ಈ ಪ್ರಶ್ನೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿರುವುದು ಬಹಳ ಸಂತೋಷ. ಕಾರಣವಿಷ್ಟೆ, ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು, ನಮ್ಮ ಜಿಲ್ಲೆಗೆ ಎರಡು ಸಮಸ್ಯೆಗಳಿದ್ದವು. ಒಂದು ಅಪ್ಪರ್ ಭದ್ರಾ, ಇನ್ನೊಂದು ಚಿತ್ರದುರ್ಗ ಕೋಟೆ. ಇಡೀ ಚಿತ್ರದುರ್ಗ ಜಿಲ್ಲೆಯ ಎಲ್ಲಾ ಸಮಾಜದವರು ಮದಕರಿ ನಾಯಕರ ಬಗ್ಗೆ ಬಹಳ ಗೌರವ ಇಟ್ಟುಕೊಂಡಿರತಕ್ಕಂಥಾದ್ದು. ಅಲ್ಲಿಂದ ಇನ್ನೊಂದು ಸಮಸ್ಯೆ ಏನೆಂದರೆ, ನಮಗೆ ಸ್ವಾತಂತ್ರ್ಯ ಬಂದು ಇಲ್ಲಿಯವರೆವಿಗೂ ನಾವು ಅಪ್ಪರ್ ಭದ್ರಾ ಬೇಕು ಬೇಕು ಎಂದು ಕೇಳುತ್ತಿದ್ದೆವು. ಆದರೆ, ಹಿಂದಿನ ಸರ್ಕಾರಗಳಲ್ಲಿ ಯಾರು ಮಾಡಲಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಇವತ್ತು ಅಪ್ಪರ್ ಭದ್ರಾ ಮಾಡಿಕೊಟ್ಟು ನಮ್ಮ ಚಿತ್ರದುರ್ಗಕ್ಕೆ ಮರೆಯಲಾಗದ ನಾಯಕರಾಗಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಎಲ್ಲಾ ಸಮುದಾಯದ ಪರವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಇದರ ಜೊತೆಗೆ ಈ ಕೋಟೆ ಹೇಗೆ ಎಂದರೆ, ಇಡೀ ಕರ್ನಾಟಕದಲ್ಲಿ ನಾಯಕ ಸಮುದಾಯಕ್ಕೆ ಸೇರಿರತಕ್ಕಂಥ ನಾಯಕರು ಈ ಕೋಟೆಯನ್ನು ಆಳಿರತಕ್ಕಂಥವರು. ಇವತ್ತು ಕರ್ನಾಟಕದ ಉದ್ದಗಲಕ್ಕೂ ನಮ್ಮ ನಾಯಕರು, ಯುವಕರು ಎಲ್ಲರೂ ಸಹ ಮದಕರಿ ನಾಯಕರ ಹೆಸರನ್ನು ಇಟ್ಟುಕೊಂಡು ಯುವಕ ಸಂಘಗಳನ್ನು ಕಟ್ಟಿಕೊಂಡಿದ್ದಾರೆ. ಇವತ್ತು ಆ ಕೋಟೆ ಮೇಲೆ ಏನು ಆಗಿದೆ ಎಂದರೆ, ಹಿಂದೆ ಎಲ್ಲಾ ಕಡೆ ಮನೆಗಳು ಬಂದಿವೆ. ಮನೆಗಳು ಬಂದು ಈ ಕೋಟೆಯನ್ನು ಆಕ್ರಮಣ ಮಾಡಿಕೊಂಡಿವೆ. ಈಗ ಏನು ನಮ್ಮ ಬಹುದಿನದ ಬೇಡಿಕೆಯಾದ ಅಪ್ಪರ್ ಭದ್ರಾವನ್ನು ತಂದು ಇಡೀ ಚಿತ್ರದುರ್ಗ ಜಿಲ್ಲೆಗೆ ಮಹಾನ್ ನಾಯಕರಾಗಿರತಕ್ಕಂಥ ಸನ್ಮಾನ್ಯ ಮುಖ್ಯಮಂತ್ರಿಗಳು, ಇಡೀ ಕರ್ನಾಟಕದ ನಾಯಕ ಸಮುದಾಯದ ಈ ಒಂದು ಹೆಮ್ಮೆಯ ನಾಯಕರಾಗಿರತಕ್ಕಂಥ ಮದಕರಿ ನಾಯಕರ ಕೋಟೆ ಮೇಲಿರತಕ್ಕಂಥ ಮನೆಗಳನ್ನು ತೆಗೆದು, ಬೇರೆ ಕಡೆ ಹಾಕಿ ಅವರಿಗೆ ಸುವ್ಯವಸ್ಥೆ ಮಾಡಿಕೊಡಿ. ಏಕೆಂದರೆ, ಅವರು ಆ ಜಾಗವನ್ನು ಬಿಡಿ ಎಂದರೆ ಬಿಡುವುದಿಲ್ಲ. ಅವರಿಗೆ ಬೇರೆ ಜಾಗ ಕೊಟ್ಟು, ಮನೆಗಳನ್ನು ಕಟ್ಟಿಸಿ ಕೊಟ್ಟರೆ ಜಾಗವನ್ನು ಬಿಡುತ್ತಾರೆ. ಅದು ಒಂದು ಬೇಡಿಕೆಯನ್ನು ಈಡೇರಿಸಿ ಇಡೀ ಕರ್ನಾಟಕದಲ್ಲಿ ಇರತಕ್ಕಂಥ ನಾಯಕರ ಹೆಮ್ಮೆಯ ನಾಯಕರಾಗಿರತಕ್ಕಂಥ ಮದಕರಿ ನಾಯಕರ ಕೋಟೆ ಉಳಿಸಿದಂಥ ಮಹಾನ್ ನಾಯಕರಾಗಲಿ. ಇಡೀ ಕರ್ನಾಟಕದಲ್ಲಿ ಇರತಕ್ಕಂಥ ಎಲ್ಲಾ

ನಾಯಕರು ನಮ್ಮ ಮುಖ್ಯಮಂತ್ರಿಗಳಿಗೆ ಧನ್ಯವಾದ ಹೇಳಿ, ಅವರ ಮಾರ್ಗದರ್ಶನದಲ್ಲಿ ನಡೆಯುತ್ತೇವೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮಾತು ಕೊಡಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು: ನಾನು ಸಲಹೆ ಕೊಡುತ್ತೇನೆ. ಕೆಲವು ದೊಡ್ಡ ದೊಡ್ಡ ವ್ಯಕ್ತಿಗಳು ಇರುತ್ತಾರೆ, ಶೂರರು, ಧೀರರು ಇರುತ್ತಾರೆ. ಮದಕರಿ ನಾಯಕರು ಶೂರರು ಹಾಗೂ ಧೀರರು ಆಗಿದ್ದಾರೆ. ಆ ರೀತಿಯಾಗಿ ಅವರು ರಾಷ್ಟ್ರಕ್ಕೆ ಆದರ್ಶಪ್ರಾಯರು. ಅಂತಹವರನ್ನು ಯಾವುದೇ ಒಂದು ಸಮೂಹಕ್ಕೆ, ಯಾವುದೇ ಒಂದು ಸಮಾಜಕ್ಕೆ ಸೀಮಿತ ಮಾಡುವುದು ಬೇಡ. ಅವರೆಲ್ಲಾ ಇಡೀ ಸಮಾಜದ ವ್ಯಕ್ತಿಗಳು. ಯಾವುದೇ ಒಂದು ಸಮುದಾಯಕ್ಕೆ ಅಂತಹ ವ್ಯಕ್ತಿಗಳನ್ನು ಸೀಮಿತ ಮಾಡುವುದು ಬೇಡ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾವೆಲ್ಲರೂ ಅದರ ಕಡೆಗೆ ಗಮನ ಕೊಡಬೇಕಾಗಿದೆ. ಯಾವುದೇ ವೀರರು, ಶರಣ–ಶರಣೆಯರನ್ನು ಯಾವುದೇ ಒಂದು ಸಮಾಜಕ್ಕೆ ಸೀಮಿತವಾಗಿ ನೋಡದೇ, ಇಡೀ ನಾಡಿನ ಸಂಪತ್ತು, ಎಲ್ಲಾ ಜನಾಂಗಕ್ಕೆ ಬೇಕಾದಂಥವರು ಎನ್ನುವ ಚಿಂತನೆಯನ್ನು ನಾವು ಮಾಡುವಂಥಾದ್ದು ಅತ್ಯಂತ ಅಗತ್ಯವಿದೆ. ನಮ್ಮ ಶಾಸಕರಾದ ತಿಪ್ಪೇಸ್ವಾಮಿಯವರ ವಿಶೇಷ ಶ್ರಮದಿಂದ ಇವತ್ತು ಪುರಾತತ್ವ ಅಧಿಕಾರ, ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ಇಲಾಖೆ, ನನ್ನ ಉತ್ತರದಲ್ಲಿ ಸ್ವಲ್ಪ ಬದಲಾವಣೆಯಿದೆ. ಈಗ ಸಿಕ್ಕಿರುವಂಥ ಮಾಹಿತಿಯಂತೆ 13–07–2009ರಂದು ಸಂಬಂಧಪಟ್ಟ ಇಲಾಖೆಯವರು ಬರೆದ ಪತ್ರದಂತೆ 118 ಜನ ಅಲ್ಲ, 137 ಜನ ಅಲ್ಲಿ un-authorize ಆಗಿದ್ದರು ಅದರಲ್ಲಿ ಈಗಾಗಲೇ ನೂರು ಜನರನ್ನು ಅಲ್ಲಿಂದ shift ಮಾಡಲಾಗಿದೆ. ಇನ್ನು ಉಳಿದಂಥ 37 ಜನರ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ಬೇರೆ ಕಡೆ ವ್ಯವಸ್ಥೆ ಮಾಡುವಂಥಾದ್ದು. ಮತ್ತೆ ತಡೆಗೋಡೆ ನಿರ್ಮಾಣ ಬಹಳ ಭರದಿಂದ ಆಗಿದೆ. ಇನ್ನು ಸ್ವಲ್ಪ ಉಳಿದಿರುವ ಕಡೆ ಸಹ ವಿಶೇಷ ಗಮನ ಕೊಡುತ್ತೇವೆಂದು ಕೇಂದ್ರ ಸರ್ಕಾರದಿಂದ ಸಂಬಂಧಪಟ್ಟ ಇಲಾಖೆಯಿಂದ ಪತ್ರ ಬಂದಿದೆ. ಚಿತ್ರದುರ್ಗ ಪಾಳೇಗಾರರ ಕೋಟೆ ಸಂರಕ್ಷಣೆಗೆ ನಾವು ಸಂಪೂರ್ಣ ಭಾರತೀಯ ಪುರಾತತ್ವ ಸರ್ವೆ ಇಲಾಖೆಯಿಂದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಇವರ ಅಭಿವೃದ್ಧಿಗೆ ಬದ್ಧರಾಗಿದ್ದೇವೆ. ಈ ಹಿಂದೆ 1 ಕೋಟಿ, 2 ಕೋಟಿ ಅನುದಾನ ಖರ್ಚು ಮಾಡುತ್ತಿದ್ದರು. ಆದರೆ, 2008–09ರಲ್ಲೂ ಸಹಾ ನಾವು ಹೆಚ್ಚು ಹಣವನ್ನು ಕೊಡುವುದಕ್ಕೆ ಆಗಿರಲಿಲ್ಲ. 2009–10ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಸೇರಿ ಒಟ್ಟು 16 ಕೋಟಿ 38 ಲಕ್ಷ ರೂಪಾಯಿಗಳನ್ನು ಈ ಒಂದು ಪುರಾತನ ಸ್ಮಾರಕಗಳ ಸಂರಕ್ಷಣೆಗೆ ಖರ್ಚು ಮಾಡುತ್ತಿದ್ದೇವೆ. ಆದ್ದರಿಂದ ಎಲ್ಲೆಲ್ಲಿ ಆ ತರಹ ಇವೆ, ಅವುಗಳನ್ನು ನಮ್ಮ ಮಾನ್ಯ ಶಾಸಕ ಬಂಧುಗಳು ನಮ್ಮ ಗಮನವನ್ನು ಸೆಳೆದರೆ, ಖಂಡಿತ ಇಡೀ ರಾಜ್ಯದಲ್ಲಿ ಇವುಗಳಿಗೆ ವಿಶೇಷ ಗಮನವನ್ನು ಕೊಡುತ್ತೇನೆ. ಮುಂದೆ ಬರುವ ದಿವಸಗಳಲ್ಲಿಯೂ

ಇದಕ್ಕೆ ಹೆಚ್ಚು ಅನುದಾನ ಕೊಟ್ಟು, ಸ್ಮಾರಕಗಳನ್ನು ಕೋಟೆಗಳನ್ನು ಉಳಿಸಿ, ಬೆಳೆಸಿ, ಅಭಿವೃದ್ಧಿಪಡಿಸುವುದಕ್ಕೆ ನಮ್ಮ ಸರ್ಕಾರ ಆದ್ಯತೆಯನ್ನು ಕೊಡುತ್ತದೆ ಎಂದು ನಾನು ಭರವಸೆಯನ್ನು ಕೊಡುತ್ತೇನೆ.

ಶ್ರೀ ತಿಪ್ಪೇಸ್ವಾಮಿ: ಈ ರಾಜ್ಯದ ಯಾರೇ ಚಿತ್ರದುರ್ಗಕ್ಕೆ ಬರಲಿ ಕೋಟೆಯ ದರ್ಶನ ಮಾಡಿ ಹೋಗುತ್ತಾರೆ. ಆದರೆ, ಅಲ್ಲಿ ಉಳಿಯುವುದಕ್ಕೆ ಯಾವುದೇ ವ್ಯವಸ್ಥೆ ಇಲ್ಲ. ಪ್ರವಾಸೋದ್ಯಮಿಗಳಿಗೆ ಉಳಿಯುವುದಕ್ಕೆ ಹೋಟೆಲ್ ವ್ಯವಸ್ಥೆ ಮಾಡಿದರೆ ತುಂಬಾ ಸಂತೋಷ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಪ್ರವಾಸೋದ್ಯಮ ಸಚಿವರು ಇಲ್ಲೇ ಇದ್ದಾರೆ. ತಕ್ಷಣ ಸೂಚನೆ ಕೊಟ್ಟು, ಅಲ್ಲಿ ಪ್ರವಾಸೋದ್ಯಮಿಗಳು ಬರುವವರಿಗೆ ಉಳಿಯುವುದಕ್ಕೆ ವ್ಯವಸ್ಥೆ ಮಾಡುವಂಥಹ ಕಟ್ಟಡ ನಿರ್ಮಾಣ ಮಾಡುವುದಕ್ಕೆ ತತ್‌ಕ್ಷಣ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ತಿಪ್ಪೇಸ್ವಾಮಿ: ಧನ್ಯವಾದಗಳು.

ವೋಲ್ವೋ, ಕೋರನಾ, ಸ್ಲೀಪರ್ ಕೋಚ್ ಪ್ರಾರಂಭಿಸುವ ಬಗ್ಗೆ

58(491) ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ(ಮುದ್ದೇಬಿಹಾಳ)
ಶ್ರೀ ಆರ್. ಅಶೋಕ್(ಸಾರಿಗೆ ಸಚಿವರು)

ಅ) ರಾಜ್ಯದಲ್ಲಿ ಪ್ರತಿನಿತ್ಯ ಒಟ್ಟು ಎಷ್ಟು ವೋಲ್ವೋ ಕೊರನಾ Sleeper ಕೋಚ್ ಬಸ್ಸ್ ಸಂಚರಿಸುತ್ತವೆ (ವಿವರ ನೀಡುವುದು;

ಸಂಸ್ಥೆಗಳು	ವೋಲ್ವೋ	ಕೋರೊನ Sleeper ಕೋಚ್
KSRTC	213	8
NWKRTC	6	14
NEKRTC	2	12
ಒಟ್ಟು	**221**	**34**

ವಿವರಗಳನ್ನು ಅನುಬಂಧ-ಅ ನಲ್ಲಿ ನೀಡಲಾಗಿದೆ.

ಆ) ಇತಿಹಾಸ ಪ್ರಸಿದ್ಧ ಸ್ಥಳವಾಗಿರುವ ಬಿಜಾಪುರಕ್ಕೆ ಪ್ರಸ್ತುತ ವೋಲ್ವೋ ಕೊರನಾ Sleeper ಕೋಚ್ ಬಸ್ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

i) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ:

ಬೆಂಗಳೂರಿನಿಂದ ಬಿಜಾಪುರಕ್ಕೆ ಯಾವುದೇ ಕರೋನಾ ಸ್ಲೀಪರ್ ಸಾರಿಗೆಯನ್ನು ಕಾರ್ಯಾಚರಣೆ ಮಾಡುತ್ತಿರುವುದಿಲ್ಲ. ಆದರೆ ಬಿಜಾಪುರ ಮಾರ್ಗ ಶಿರಡಿಗೆ ಒಂದು ದುಂಡುಸುತ್ತುವಳಿಯ ವೋಲ್ವೋ ಸಾರಿಗೆಯನ್ನು ಕಾರ್ಯಾಚರಣೆ